ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಬರ ಗ್ರಾಮದಿಂದ ಜಲ ಗ್ರಾಮವಾಗಿ ಬದಲಾದ ಮರಳಿಪುರ



ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಕೋನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರಳಿಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಸುಮಾರು 22ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಒಟ್ಟು 80 ಕುಟುಂಬಗಳು ಇದ್ದು 354 ಜನರು ಇಲ್ಲಿ ವಾಸಿಸುತ್ತಿದ್ದಾರೆ.

ಜಲಕ್ರಾಂತಿಗೆ ಸಾಕ್ಷಿಯಾದ ಮರಳಿಪುರ ಗ್ರಾಮದ ಚಿತ್ರಣ ಈ ಹಿಂದೆ ಇದೇ ರೀತಿ ಇರಲಿಲ್ಲ. ಈ ಭಾಗದಲ್ಲಿ ಗ್ರಾಮಸ್ಥರು ಬರದ ಸಮಸ್ಯೆಯನ್ನು ಎದುರಿಸುತ್ತಿದ್ದರು. ಅಂತರ್ಜಲದ ಮಟ್ಟ ಕುಸಿತದಿಂದ ನೀರಿನ ಸಮಸ್ಯೆಯ ಉಲ್ಬಣಗೊಂಡಿತ್ತು.

ಕುಡಿಯುವ ನೀರಿನ ಸಮಸ್ಯೆಯಿಂದ ಕಂಗಾಲಾಗಿದ್ದ ಜನರ ಪಾಲಿಗೆ ವರದಾನವಾಗಿ ಬಂದಿದ್ದೇ ಜಲಜೀವನ್ ಮಿಷನ್ ಯೋಜನೆ. ಗ್ರಾಮದ ಪ್ರತಿಯೊಂದು ಮನೆಗೂ ಕಾರ್ಯಾತ್ಮಕ ಗೃಹನಳ ಸಂಪರ್ಕದ ಮೂಲಕ ಶುದ್ಧ ಹಾಗೂ ಸುರಕ್ಷಿತ ಕುಡಿಯುವ ನೀರನ್ನು ಕೊಡುವ ಉದ್ದೇಶದಿಂದ ಆರಂಭಗೊಂಡ ಜಲಜೀವನ್ ಮಿಷನ್ ಯೋಜನೆ ಮರಳಿಪುರ ಗ್ರಾಮದ ಜನರ ಸಮಸ್ಯೆಗೂ ಪೂರ್ಣವಿರಾಮ ಇಟ್ಟಿದೆ.

ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳ ಶ್ರಮದಿಂದ ಬರ ಗ್ರಾಮವಾಗಿದ್ದ ಮರಳಿಪುರ ಇಂದು ಜಲ ಗ್ರಾಮವಾಗಿ ಪರಿವರ್ತನೆಗೊಂಡಿದೆ.

## ಯೋಜನೆ ಅನುಷ್ಠಾನದ ಸಂದರ್ಭದಲ್ಲಿ ಎದುರಾದ ಪ್ರಮುಖ ಸವಾಲುಗಳು:

ಕುಡಿಯುವ ನೀರಿನ ಸಮಸ್ಯೆಗೆ ಆದಷ್ಟು ಬೇಗ ಪರಿಹಾರ ಸಿಗಲಿ ಎಂಬ ಆಸೆಯಿದ್ದರು ಮರಳಿಪುರ ಗ್ರಾಮಸ್ಥರಿಗೆ ಜಲಜೀವನ್ ಮಿಷನ್ ಯೋಜನೆಯನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಸಾಕಷ್ಟು ಗೊಂದಲ, ಆತಂಕಗಳಿದ್ದವು. ಇದರಿಂದ ಯೋಜನೆ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಸವಾಲುಗಳು ಎದುರಾಗಿತ್ತು.

ಯೋಜನೆ ಜಾರಿಯಾಗುವ ಮುನ್ನ, ಗ್ರಾಮಸ್ಥರ ಅನಿಸಿಕೆಯ ಪ್ರಕಾರ, ಜಲಜೀವನ್ ಮಿಷನ್ ಯೋಜನೆಯಿಂದ ಕುಡಿಯುವ ನೀರಿನ ಪ್ರಮಾಣ ಕಡಿಮೆಯಾಗುತ್ತದೆ, ಜನ-ಜಾನುವಾರುಗಳಿಗೆ ನೀರಿನ ಕೊರತೆ ಉಂಟಾಗುತ್ತದೆ, ಹೆಚ್ಚು ಬಿಲ್ ಕಟ್ಟಬೇಕಾಗುತ್ತದೆ, ಈ ಯೋಜನೆ ಕೆಲವು ದಿನವಷ್ಟೇ ಅನ್ವಯವಾಗುತ್ತದೆ ಎಂಬೆಲ್ಲಾ ಗೊಂದಲವಿತ್ತು. ಈಗಾಗಲೇ ನೀರಿನ ಅಭಾವ ಇದೆ. ಈ ಯೋಜನೆಯಿಂದ ಇನ್ನೂ ಸಮಸ್ಯೆ ಹೆಚ್ಚಾಗುತ್ತದೆ ಎಂದು ತಿರಸ್ಕರಿಸಿದ್ದರು. ಆದರೆ ಪಂಚಾಯಿತಿ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಯೋಜನೆಯ ಅನುಕೂಲಗಳ ಕುರಿತು ಸಭೆ ನಡೆಸುವುದು, ಗೋಡೆ ಬರಹ, ಕಿರುಚಿತ್ರ ಪ್ರದರ್ಶನಗಳನ್ನು ಹಮ್ಮಿಕೊಳ್ಳುವ ಮೂಲಕ ಜನರ ಮನ ಒಲಿಸುವಲ್ಲಿ ಯಶಸ್ವಿಯಾದರು.

ಪಂಚಾಯಿತಿ ಅಧಿಕಾರಿಗಳು ಹಾಗೂ ಇಲಾಖೆ ಇಂಜಿನಿಯರ್ ಗಳ ಸತತ ಪರಿಶ್ರಮದ ಫಲವಾಗಿ ಕೊನೆಗೂ ಮರಳಿಪುರ ಗ್ರಾಮದಲ್ಲಿ ಜಲಜೀವನ್ ಮಿಷನ್ ಯಶಸ್ವಿಗೊಂಡಿದೆ.

ಕುಡಿಯುವ ನೀರಿನ ಸಮಸ್ಯೆಯಿಂದ ಚಿಂತೆಗೀಡಾಗಿದ್ದ ಮರಳಿಪುರ ಗ್ರಾಮದ ಜನರು ಇಂದು ಜಲಜೀವನ್ ಮಿಷನ್ ನಿಂದ ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಾರೆ.



ಸ್ವಚ್ಛ ಸಂಕೀರ್ಣ ಜಲೋತ್ಸವ ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್